ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಉಡುಪಿ ಇವರ ನ್ಯಾಯಾಲಯದಲ್ಲಿ

| ಪ್ರಕರಣ ಸಂಖ್ಯೆ: | ಸಿಸಿ : **4033/2019** | ಸಿಡಬ್ಲ್ಯೂ: **4** | ಪಿಡಬ್ಲ್ಯೂ: **3** |
|---|---|---|---|
| ಹೆಸರು: ಮಂಜಯ್ಯ ನಾಯಕ್ | ತಂದೆಯ ಹೆಸರು: | ದುರ್ಗಾ ಯಾನೆ ಕುನ್ನಿಯಾ ನಾಯಕ್ | |
| ವಯಸ್ಸು **37** ವರ್ಷ | ಉದ್ಯೋಗ: | ಕೂಲಿ | |
| | ವಾಸ/ಸ್ಥಳ | ಅಲೆವೂರು | |

ದಿ: 09-10-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ಚಾಸಾ-**1** ನನ್ನ ಹೆಂಡತಿ. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇದೆ. ಅವರು ನಮ್ಮ ನೆರೆಕೆರೆಯವರು. ನಾನು ಕಳೆದ ಸುಮಾರು **30** ವರ್ಷಗಳಿಂದ ಪ್ರಗತಿ ನಗರ ಅಲೆವೂರಿನಲ್ಲಿ ಚಾಸಾ-**1** ರವರೊಂದಿಗೆ ವಾಸಮಾಡಿಕೊಂಡು ಬಂದಿರುತ್ತೇನೆ. ಪೋಲೀಸರು ನನ್ನನ್ನು ವಿಚಾರಿಸಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

ದಿ: **08-05-2019** ರಂದು ನಾನು ಕೂಲಿ ಕೆಲಸದ ನಿಮಿತ್ತವಾಗಿ ಮನೆಯಿಂದ ಹೊರಗೆ ಹೋಗಿದ್ದು ಬೆಳಿಗ್ಗೆ ಸುಮಾರು **11.00** ಗಂಟೆ ಸಮಯಕ್ಕೆ ಚಾಸಾ-**1** ರವರು ನನಗೆ ಫೋನ್ ಕರೆ ಮಾಡಿ ನನ್ನ ಮನೆಯ ಅಂಗಳದಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿ ಅಕ್ರಮ ಪ್ರವೇಶ ಮಾಡಿ ಗಲಾಟೆ ಮಾಡುತ್ತಿರುತ್ತಾರೆ ಎಂದು ತಿಳಿಸಿರುತ್ತಾರೆ. ಚಾಸಾ-**1** ರವರು ಆರೋಪಿತರು ತನ್ನ ಮನೆಯ ಅಂಗಳಕ್ಕೆ ಬಂದು ಒಂದು ಕೋಲಿನಿಂದ ತನ್ನ ತೊಡೆಯ ಭಾಗಕ್ಕೆ ಹೊಡೆದು ಗಾಯಗೊಳಿಸಿ ಕಲ್ಲಿನಿಂದ ತನಗೆ ಹೊಡೆಯಲು ಪ್ರಯತ್ನಿಸಿ ಎಸೆದ ಕಲ್ಲು ಮನೆಯ ಬಳಿ ಬಿದ್ದಿರುತ್ತದೆ ಎಂದು ತಿಳಿಸಿರುತ್ತಾರೆ. ನಾನು ಚಾಸಾ-**1** ರವರಿಗೆ ಮಣಿಪಾಲ ಪೋಲೀಸ್ ಠಾಣೆಯವರಿಗೆ ದೂರು ನೀಡುವಂತೆ ತಿಳಿಸಿರುತ್ತೇನೆ. ಆರೋಪಿತರು ಈ ಹಿಂದೆ ನಮ್ಮೊಂದಿಗೆ ಬೇಲಿ ವಿಷಯದಲ್ಲಿ ಮತ್ತು ಗೇರು ಬೀಜ ಹೆಕ್ಕುವ ವಿಷಯದಲ್ಲಿ ನೆಪ ಒಡ್ಡಿ ಈ ರೀತಿ ದ್ವೇಷದಿಂದ ಈ ಕೃತ್ಯ ಎಸಗಿರುತ್ತಾರೆ.

**ಪಾಟಿ ಸವಾಲು: ಆರೋಪಿ ಪರ ಶ್ರೀ ಬಿ.ಆರ್.ಡಿ ವಕೀಲರಿಂದ:-**

ಚಾಸಾ-1 ನನ್ನ ಹೆಂಡತಿ. ಆರೋಪಿತರು ಒಳ್ಳೆಯವರು ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಮತ್ತು ಆರೋಪಿತರೊಂದಿಗೆ ಬೇಲಿ ವಿಷಯದಲ್ಲಿ ತಕರಾರು ಇತ್ತು ಎಂದರೆ ಸರಿ.

This is a True Copy of the Court Records Online. Authenticated @ districts.ecourtsindia.com/cnr/KAUP030075802019/truecopy/order-4.pdf

ಚಾಸಾ-1 ರವರ ವಿರುದ್ದ ಆರೋಪಿತರು ಪಂಚಾಯಿತಿ ಒಂದು ದೂರನ್ನು ನೀಡಿದ್ದಾರೆ ಎಂದರೆ ಸರಿ. ನಮ್ಮ ಮನೆಯ ಪಕ್ಕದಲ್ಲಿ ಬೇರೆ ಮನೆಗಳು ಇವೆ ಎಂದರೆ ಸರಿ. ಅಲ್ಲಿ ಬೊಬ್ಬೆ ಹಾಕಿದರೆ ಬೇರೆ ಜನ ಎಲ್ಲಾ ಬರುತ್ತಾರೆ ಎಂದರೆ ಸರಿ. ನಾನು ನನ್ನ ಹೆಂಡತಿ ಹೇಳಿದ್ದಕ್ಕೆ ಸಾಕ್ಷಿಯಾಗಿರುತ್ತೇನೆ ಎಂದರೆ ಸಾಕ್ಷಿಯು ನಾನು ಪೋಲೀಸ್ ಠಾಣೆ ಗೆ ಹೋಗಿರುತ್ತೇನೆ ಎಂದು ನುಡಿದಿರುತ್ತಾರೆ. ನಾನು ಪೋಲೀಸನವರಿಗೆ ಹೇಳಿಕೆ ನೀಡಿರುತ್ತೇನೆ. ನಾನು ನನ್ನ ಹೆಂಡತಿಯ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಉಡುಪಿ.(C/c)

This is a True Copy of the Court Records Online. Authenticated @ districts.ecourtsindia.com/cnr/KAUP030075802019/truecopy/order-4.pdf